ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಬೇಕು. ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು. ನಿಮಗೆ ನನ್ನ ಸಹಕಾರ ಬೇಕು ಅಂದರೆ ನೀವು ವಿಷಯವನ್ನು ಬರೆದು ನನಗೆ ಕಳುಹಿಸಿಕೊಡಿ. ನಾನು ಆ ಕುರಿತು ಸೂಕ್ತ ಕ್ರಮತೆಗೆದುಕೊಳ್ಳಿ ಎಂದು ಮಾನ್ಯ ಮಂತ್ರಿಯವರಿಗೆ ಬರೆದು ಕಳುಹಿಸುತ್ತೇನೆ. ಈಗ ವೆಂಕಟರಾಮಯ್ಯನವರ ಗಮನ ಸೆಳೆಯುವ ಸೂಚನೆ : ಇದನ್ನು ನಾಳೆ ತೆಗೆದುಕೊಳ್ಳೋಣ....

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ.....

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನನ್ನನ್ನು ಸಂಬಿ ಎಂದು ಹೇಳುತ್ತಿದ್ದೇನೆ. ರಿಪೋರ್ಟ್‌ನಲ್ಲಿ ಇವರು ಹೇಳಿದಂಥ ರೀತಿಯಲ್ಲಿ ಇಲ್ಲ ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು.—ನಾಯಕ್‌ರವರೇ ತಾವುಗಳು ಬರೆದು ಕೊಡಿ, ನೋಡೋಣ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನನ್ನ ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ. ಆವರಿಗೆ ಅಪನಂಬಿಕೆ ಆದರೆ ಬೇರೆ ರೀತಿಯಲ್ಲಿ ವಿಚಾರಣೆ ಮಾಡಿ ಕ್ರಮತೆಗೆದು ಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ನಿಯಮ ೩೩ಳಿರ ಮೇರೆಗೆ

(೧) ದ. ಕ. ಜಿಲ್ಲೆಯಲ್ಲಿ ಬೈಕಾಂಪಾಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ರಚನೆ

†ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರು ಮಂಗಳೂರಿನ ಬಳಿ ಬೈಕಂಪಾಡಿಯಲ್ಲಿ ರಚಿಸಲು ಬಹುವರ್ಷಗಳ ಹಿಂದೆ ಉದ್ದೇಶಿಸಲಾದ ಮಾರುಕಟ್ಟೆ ಯಾರ್ಡ್ ಇನ್ನೂ ನೆನೆಗುದಿಯಲ್ಲಿ ಬಿದ್ದಿದೆ. ಈ ಸಲುವಾಗಿ ಭೂಸ್ವಾಧೀನ ಮಾಡಿಕೊಂಡ ಜಾಗದಲ್ಲಿ ಸಪ ಯಾವುದೇ ರಚನಾ ಕಾರ್ಯ ನಡೆದಿಲ್ಲ. ಬದಲು ಕೆಲವು ಸ್ಥಳೀಯರಿಂದ ಪ್ರವೇಶ ನಡೆದಿದೆಯಾಗಿ ತಿಳಿದು ಬರುತ್ತದೆ. ವಿಶ್ವಬ್ಯಾಂಕಿನ ಕೋಟ್ಯಾಂತರ ರೂಪಾಯಿಗಳ ನೆರವಿನ ಯೋಜನೆಯಿದ್ದೂ ಈಗಿರುವ ಸ್ಥಿತಿಯಲ್ಲಿ ರೈತರಿಗೂ ವ್ಯಾಪಾರಿಗಳಿಗೂ ತ್ರಾಸದಾಯಕವಾದ ಮಾರುಕಟ್ಟೆಯ ಬದಲಿಗೆ ಬೈಕಂಪಾಡಿಯಲ್ಲಿ ಹೊಸ ಮಾರುಕಟ್ಟೆ ರಚಿಸಲು ಯಾವಾಗ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ನಾವು ೮೫ ಎಕರೆ ೮೮ ಸೆಂಟ್ಸನ್ನು ಬೈಕಂಪಾಡಿ ಏರಿಯಾದಲ್ಲಿ ಅಕ್ವಿಜಿಷನ್ ಮಾಡಿಕೊಳ್ಳಬೇಕೆಂದು ಕೇಳಿದ್ದೇವೆ. ಈಗ ಪಾಸಕ್ಕೆಂದು ಸ್ವಲ್ಪ ಕೊಟ್ಟಿದ್ದಾರೆ. ಇನ್ನೂ ೭ ಎಕರೆ ೯೩ ಸೆಂಟ್ಸ್ ಬರಬೇಕಾಗಿದೆ. ಇದಕ್ಕೆ ಮೊದಲೇ ೨೨,೩೨,೦೦೦ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತೊಂದರೆ ಏಕಾಯಿತೆಂದರೆ ಜಮೀನು ಬಂದಾಗ ಒಂದೇ ಸಲ ಬರಲಿಲ್ಲ. ಎನ್‌ಕ್ರೋಚ್‌ಮೆಂಟ್ ಬೇರೆ ಇದೆ. ರಸ್ತೆ ಭಾಗದಲ್ಲಿ ಇರುವಂಥ ವನ್ನು ತೆಗೆಸಿದ್ದೇವೆ. ಇನ್ನೂ ೪೭ ಮನೆಗಳನ್ನು ಮಧ್ಯದಿಂದ ತೆಗೆಸಿದ ಮೇಲೆ ಪ್ಲಾನು ಏಸ್ಟಿಮೇಟು ಮಾಡಿಸಬೇಕಾಗುತ್ತದೆ. ಈಗಾಗಲೇ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದೇವೆ. ನಿಧಾನ ವಾಗಿರುವುದು ನಿಜ, ಶೀಘ್ರವಾಗಿ ಮಾಡಿಸುತ್ತೇವೆ.

(೨) ಕೋಲಾರ ಜಿಲ್ಲೆಯಲ್ಲಿ ಹಿಂದಂಳಿದ ಹಾಗೂ ಅಲ್ಪಸಂಖ್ಯಾತರ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು ನಿಲ್ಲಿಸಿರುವುದು

†ಡಾ. ಬಿ ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯಲ್ಲಿ ಕಳೆದ ಸಾಲಿನ ಅಂದರೆ ೧೯೮೬ನೇ ಸಾಲಿನ ಫೆಬ್ರವರಿ, ಡಿಸೆಂಬರ್, ದಸರಾ ರಜೆಯಲ್ಲಿ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು ವಿನಾಕಾರಣ ನಿಲ್ಲಿಸಿದ್ದರು, ಕಾರಣವೇನು ?

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ವಿದ್ಯಾರ್ಥಿನಿಲಯಗಳನ್ನು ಸರ್ಕಾರ ನಡೆಸುತ್ತಿದ್ದು ಅದಕ್ಕೆ ತನ್ನದೇ ಆದ ಇಲಾಖೆಯು ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿ ಇರ್ವರಿರುತ್ತಾರೆ. ಇಲಾಖಾ ವಿದ್ಯಾರ್ಥಿನಿಲಯಗಳ ಕಾನೂನು ಪ್ರಕಾರ ವಿದ್ಯಾರ್ಥಿನಿಲಯಗಳು ವರ್ಷದ ಪ್ರಾರಂಭದಿಂದ ಹತ್ತು ತಿಂಗಳ ಕಾಲ ಉಚಿತ ಊಟ ಮತ್ತು ವಸತಿ ನೀಡುವುದು ಕಡ್ಡಾಯವಾದ ವಿಚಾರವಾಗಿರುತ್ತೆ. ಆದರೆ ಕಳೆದ ಸಾಲಿನಲ್ಲಿ ದಸರಾ ರಜೆ ಹಾಗೂ ಮಧ್ಯ ಕಾಲೀನ ರಜೆ ಪ್ರಯುಕ್ತ ಸದರಿ ಜಿಲ್ಲಾಧಿಕಾರಿಗಳು ಕೋಲಾರ ನಗರದಲ್ಲಿಯೇ ಇರುವ ವಿದ್ಯಾರ್ಥಿನಿಲಯಗಳನ್ನು ನಿಲ್ಲಿಸುತ್ತಾರೆ. ಈ ಬಗ್ಗೆ ವಿದ್ಯಾರ್ಥಿಗಳು ಪ್ರತಿಬಟನೆ ಸಲ್ಲಿಸಿದ್ದು ನಂತರ ಹುಡುಗರ ವಿದ್ಯಾರ್ಥಿನಿಲಯದಲ್ಲಿ ೧೨೫ ವಿದ್ಯಾರ್ಥಿಗಳಿದ್ದು ಕೇವಲ ೨೦ ವಿದ್ಯಾರ್ಥಿಗಳಿಗೆ ಊಟ ಒದಗಿಸಿರುತ್ತಾರೆ. ಈ ರೀತಿ ಬೇಜವಾಬ್ದಾರಿಯಿಂದ ವಿದ್ಯಾರ್ಥಿಗಳಿಗೆ ಒಂದು ತಿಂಗಳು ಊಟ ನೀಡದೆ ತೊಂದರೆ ಕೊಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೇ ? ಈ ಬಗ್ಗೆ ಅಲ್ಲಿನ ವಿದ್ಯಾರ್ಥಿಗಳು ನಿಮಗೂ ಹಾಗೂ ಸಂಬಂಧಿಸಿದ ಇಲಾಖಾ ವರಿಷ್ಠರಿಗೂ ಮನವಿ ಸಲ್ಲಿಸಿ ವಿಫಲರಾಗಿರುತ್ತಾರೆ, ಇದಕ್ಕೆ ಕಾರಣವೇನು ? ಈ ರೀತಿ ವಿದ್ಯಾರ್ಥಿಗಳಿಗೆ ಸರ್ಕಾರ ತೊಂದರೆ ಕೊಡುವುದು ಸಮಂಜಸವೇ ? ಇದು ಮನವೀಯ ದೃಷ್ಟಿಯಿಂದ ಸರಿಯೆ ? ಈ ರೀತಿ ತೊಂದರೆಗೆ ಒಳಗಾದ ವಿದ್ಯಾರ್ಥಿಗಳ ಭವಿಷ್ಯವೇನು ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಕೆಳಗಿನ ಹೇಳಿಕೆಯನ್ನು ಮಾಡ ಬಯಸುತ್ತೇನೆ.

ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೧೦೦ ಜೆಎಂಎಸ್ ೮೬ ದಿನಾಂಕ ೨೦-೬-೮೬ರ ಸರ್ಕಾರ ಶೈಕ್ಷಣಿಕ ವರ್ಷಕ್ಕೆ ಸರಿಸಾಗಿ ವಿದ್ಯಾರ್ಥಿ ನಿಲಯವನ್ನು ೧೦ ತಿಂಗಳ ವರೆಗೆ ಮಾತ್ರ ನಡೆಸಬೇಕಾಗುತ್ತದೆ. ಆದರೂ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮುಗಿಯುವವರೆಗೆ ಊಟದ ವ್ಯವಸ್ಥೆಯನ್ನು ನೀಡಬಹುದು ? ಪರೀಕ್ಷೆಗಳು ಮುಗಿದಂತೆ, ವಿದ್ಯಾರ್ಥಿಗಳು ನಿಲಯವನ್ನು ತೆರವು ಮಾಡಬೇಕಾಗಿದೆ. ೧೦ ತಿಂಗಳ ಊಟದ ವೆಚ್ಚದ ಖರ್ಚಿನಲ್ಲಿ ವಿದ್ಯಾರ್ಥಿನಿಲಯವನ್ನು ಏಪ್ರಿಲ್: ಮೇ ತಿಂಗಳುಗಳಲ್ಲಿ ಪರೀಕ್ಷೆಗಾಗಿ ತರೆದಿರ ಬೇಕಾಗಿರುವುದರಿಂದ ದಸರಾ ರಜೆಯಲ್ಲಿ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಒದಗಿಸಲು ಬರುವುದಿಲ್ಲ. ಆ ಅವಧಿಯಲ್ಲಿ ತರಗತಿಗಳು ಇರುವುದಿಲ್ಲ.

ಇಂತಹ ಪ್ರಸ್ತಾವನೆ ರಾಜ್ಯದ ೨೦ ಜಿಲ್ಲೆಗಳ ಪೈಕಿ ಕೋಲಾರ ಜಿಲ್ಲೆಯಿಂದ ಮಾತ್ರ ಬಂದಿರುತ್ತದೆ. ಆದರಲ್ಲಿಯು ಮೆಟ್ರಿಕ್ ನಂತರದ ಕೋಲಾರ ಬಾಲಕರ ವಿದ್ಯಾರ್ಥಿ ನಿಲಯದಿಂದ ಮಾತ್ರ ಬೇಡಿಕೆ ಬಂದಿದೆ. ಸರ್ಕಾರದ ಆದೇಶದಂತೆ ಶಾಲೆಗಳು, ಕಾಲೇಜುಗಳು ನಡೆದಲ್ಲಿ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅಲ್ಲದೆ ರಜೆಯಲ್ಲಿ ವಿಶೇಷ ತರಗತಿಗಳು ನಡೆಯುತ್ತಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ, [ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರುಗಳಿಂದ ಧೃಢೀಕರಣ ಪತ್ರದ ಆಧಾರದ ಮೇಲೆ ರಜಾ ಅವಧಿಯಲ್ಲಿ ಊಟದ ವ್ಯವಸ್ಥೆಯನ್ನು ನೀಡಲಾಗುವುದು.

ಒಂದು ವೇಳೆ ದಸರಾ ರಜೆಯಲ್ಲಿ ಕೋಲಾರದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿಗಳಿಗೆ ಮಾತ್ರ ಊಟದ ವ್ಯವಸ್ಥೆಯನ್ನು ಏರ್ಪಡಿಸಿದಲ್ಲಿ, ಇದಕ್ಕೆ ಹೆಚ್ಚುವರಿ ಹಣ ಬೇಕಾಗುತ್ತದೆ. ದಸರಾ ರಜೆ ಒಂದು ತಿಂಗಳು ಎಂದು ಭಾವಿಸಿ, ಹೆಚ್ಚುವರಿ ವೆಚ್ಚವನ್ನು ಸರ್ಕಾರದವರು ಮಂಜೂರು ಮಾಡ ಬೇಕಾಗುತ್ತದೆ. ಈ ವ್ಯವಸ್ಥೆಯನ್ನು ಕೋಲಾರದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಾತ್ರ ಸೀಮಿತ ಮಾಡಲು ಬರುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ೬೫ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೂ ವಿಸ್ತರಿಸಬೇಕು.

ದಿನಾಂಕ ೯-೧೧-೮೬ ರಂದು ನಿರ್ದೇಶಕರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರು ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ ಕೋಲಾರಕ್ಕೆ ಅನಿರೀಕ್ಷಿತ ಭೇಟಿ ನೀಡಿದಾಗ ೪ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆಗಳು ಇದ್ದರೂ, ಅವರುಗಳು ವಿದ್ಯಾರ್ಥಿ ನಿಲಯದಲ್ಲಿ ಅಮೂಲ್ಯವಾದ ಸಮಯವನ್ನು ಪೋಲು ಮಾಡುತ್ತಿರುವುದು ಅವರ ಗಮನಕ್ಕೆ ಬಂದಿದೆ. ಇವರುಗಳು ಪರೀಕ್ಷೆಗೆ ಸಿದ್ಧತೆ ನಡೆಸುವ ಬದಲು ಕೆರಂ ಆಟ ಆಡುತ್ತಿದ್ದರು. ಆದ್ದರಿಂದ ದಸರಾ ರಜೆಯಲ್ಲಿ ವಿದ್ಯಾರ್ಥಿಗಳಿಗೆ ತರಗತಿಗಳು ಇಲ್ಲದೆ ಊಟದ ವ್ಯವಸ್ಥೆಯನ್ನು ಒದಗಿಸುವುದು ಸಮಂಜಸವಲ್ಲ.